ಶ್ರೀ ಎಸ್. ಆರ್. ಬೊಮ್ಮಾಯಿ.—ಇವು ಸ್ವತಂತ್ರವಾದ ಸಂಸ್ಥೆಗಳು ಅಲ್ಲಿ ಬೇಕಾದರೆ ಚರ್ಚೆ ಮಾಡಬಹುದು. ಮುಖ್ಯ ಕಾರ್ಯದರ್ಶಿಯವರಿಗೆ ಕಳಿಸಿಕೊಡುತ್ತೇವೆ ಎಂದು ಹೇಳಿದ್ದೇವೆ. ಇನ್ನೇನು ಮಾಡಲು ಸಾಧ್ಯ ? ಇದಕ್ಕೆ ಒಂದು ಲಿಮಿಟ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಗಂಟಲು ಜಾಸ್ತಿ ಇದೆಯೆಂದು ಕೂಗಿದರೆ ಪ್ರಯೋಜನ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಇಬ್ಬರು ಮಾಡುತ್ತಿದ್ದೇವೆ ಎಂದು ನೀವಿಬ್ಬರೂ ಮಾಡುತ್ತಿದ್ದೀರೇನು ?

೩. ಸಾಗರ ವಿಭಾಗದ ಅರಣ್ಯದಿಂದ ಹಾಲ್ಮಡ್ಡಿ ಕದಿಯುತ್ತಿದ್ದವರನ್ನು ಹಿಡಿದ ಜಿಲ್ಲಾ ಅರಣ್ಯ ಅಧಿಕಾರಿಯವರನ್ನು ವರ್ಗ ಮಾಡಿರುವುದು.

ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ಅಧ್ಯಕ್ಷರೇ, ಸಾಗರ ಅರಣ್ಯ ವಿಭಾಗದಿಂದ ಹಾಲ್ಮಡ್ಡಿ ಕದಿಯುತ್ತಿದ್ದವರನ್ನು ಹಿಡಿದ ಜಿಲ್ಲಾ ಅರಣ್ಯ ಅಧಿಕಾರಿಯವರನ್ನು ವರ್ಗಾವಣೆ ಮಾಡಿರುವ ಬಗ್ಗೆ ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ ರಾಚಯ್ಯ (ಕೃಷಿ ಮತ್ತು ಅರಣ್ಯಖಾತೆ ಸಚಿವರು).— ಮಾನ್ಯ ಅಧ್ಯಕ್ಷರೇ, ಸಾಗರ ಡಿವಿಜನ್‌ನ ಡೆಪ್ಯುಟಿ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಅವರನ್ನು ವರ್ಗ ಮಾಡಿರುತ್ತಾರೆ. ಇನ್ನೂ ಕೂಡಾ ಅವರು ಚಾರ್ಜ್ ಕೊಟ್ಟಿಲ್ಲ. ಈ ವಿಷಯದಲ್ಲಿ ಈಗಾಗಲೇ ಸಂಬಂಧಪಟ್ಟ ಚೀಫ್ ಕನ್ಸರ್ವೇಟರ್ ಜೊತೆಯಲ್ಲಿ ಚರ್ಚೆ ಮಾಡಿ, ಈ ವರ್ಗ ಆಗಿದೆಯಲ್ಲಾ ಇದು ಯಾವ ಸಂದರ್ಭದಲ್ಲಿ ವರ್ಗ ಆಯಿತಂ, ಇದಕ್ಕೆ ಕಾರಣ ಏನು ಎಂದು ಕೇಳಿದ್ದೇನೆ. ನನಗೆ ಇನ್ನೂ ಮಾಹಿತಿ ಬಂದಿಲ್ಲ ಬಂದಮೇಲೆ ನೋಡುತ್ತೇನೆ. ಈ ರೀತಿ ಇವರನ್ನು ಹಠಾತ್ ವರ್ಗಾವಣೆ ಮಾಡಿರುತ್ತಾರೆಯೇ ಅಥವಾ ಹಿಂದಿನಿಂದಲೂ ಏನಾದರೂ ಇವರ ವರ್ಗಾವಣೆಗೆ ಪ್ರಸ್ತಾವನೆಗಳು ಏಂದಿವೆಯೇ ಇಲ್ಲವೇ ಎಂಬ ಬಗ್ಗೆ ಪೂರ್ಣ ಮಾಹಿತಿ ಸಿಕ್ಕಿಲ್ಲ. ಆದಕ್ಕೋಸ್ಕರ ಆ ಮಾಹಿತಿ ತರಿಸಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೇ, ಸರಕಾರಕ್ಕೆ ಮತ್ತು ಒಳ್ಳೆಯ ಅಧಿಕಾರಿಗಳಿಗೆ ವಿರೋಧ ಇದೆ. ಕೋಯಾ ಎನ್ನುವಂತಹ ಜನತಾ ಮುನಿಸಿಪಾಲಿಟಿ ಮೆಂಬರ್ ಮನೆಯಲ್ಲಿ ನಾಲ್ಕು ಸಾವಿರ ಕೆ ಜಿ. ಹಾಲ್ಮಡ್ಡಿ ಭೂಪ ಸಿಕ್ಕಿದೆ ಅದನ್ನು ಈ ಅರಣ್ಯ ಅಧಿಕಾರಿಗಳು ಹೋಗಿ ಹಿಡಿದಿದ್ದಾರೆ. ಜನತಾ ಪಕ್ಷದ ಮುಖಂಡರುಗಳು ಬಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಇವರನ್ನು ಟ್ರಾನ್ಸ್‌ಫರ್ ಮಾಡಿಸಿರುತ್ತಾರೆ. ನಾನು ಸರಕಾರಕ್ಕೆ ಹೇಳುವುದು ಇಷ್ಟೇ. ಭ್ರಷ್ಟತನ ಮಾಡುವವರನ್ನು, ಸ್ಮಗ್ಲಿಂಗ್ ಮಾಡುವವರನ್ನು ಹಿಡಿಯಬೇಕೋ ಬೇಡವೋ ? ಹಿಡಿದರೆ ಟ್ರಾನ್ಸ್‌ಫರ್ ಮಾಡುತ್ತೀರಿ, ಹಿಡಿಯದೇ ಬಿಟ್ಟರೆ ಪ್ರಮೋಷನ್ ಕೊಡುತ್ತೀರಿ. ಈ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡುತ್ತೀರಾ ? ಒಳ್ಳೆಯ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿ, ಅವರಿಂದ ಆಗುವ ಒಳ್ಳೆಯ ಕೆಲಸಕ್ಕೆ ತೊಂದರೆ ಕೊಡುವಂತಹ ಭ್ರಷ್ಟ ಅಧಿಕಾರಿಗಳನ್ನು ಹಿಡಿಯಲಿಕ್ಕೆ ಸರಕಾರ ಏನು ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ರಾಚಯ್ಯ.— ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುವುದಿಲ್ಲ. ಯಾರು ಒಳ್ಳೆಯ ಕೆಲಸ ಮಾಡುತ್ತಾರೆ ಅವರಿಗೆ ರಕ್ಷಣೆ ಕೊಡ ತ್ತೇವೆ. ಪೂರ್ಣ ಮಾಹಿತಿ ನನ್ನ ಹತ್ತಿರ ಇಲ್ಲ ಎಂದು ಹೇಳಿದ್ದೇನೆ. ಈ ಭಾವನೆ ಅವರಿಗೆ ಬೇಡ.

ಅಧ್ಯಕ್ಷರು.— ಮಾನ್ಯ ಡಿಸೋಜಾರವರೇ ತಾವು ಕೇಳಿರಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಮಂಗಳೂರು).— ಅಧ್ಯಕ್ಷರೇ, ೪೫೦೦ ಕೆ.ಜಿ ಹಾಲು ಮಡ್ಡಿಯನ್ನು ಹಿಡಿದಿದ್ದಾಗಿ. ಮಾನ್ಯ ಕಾನಡೆಯವರು ಹೇಳಿದಹಾಗೆ ಇಂತಹ ಒಳ್ಳೆಯ ಆಫೀಸರ್‌ನ್ನು ಟ್ರಾನ್ಸ್‌ಫರ್ ಮಾಡಿದರೆ, ಇನ್ನು ಮುಂದೆ ನಮ್ಮ ಅರಣ್ಯ ಸಂಪತ್ತೆಲ್ಲಾ ಮಯವಾಗಿಬಿಹುದು. ಆದಕ್ಕಾಗಿ ನಾವು ಸರಕಾರವನ್ನು ಕೇಳುತ್ತಿದ್ದೇವೆ, ಯಾರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ, ಯಾರು ನೀತಿಯಿಂದ ಕೆಲಸ ಮಾಡುತ್ತಿದ್ದಾರೆ ಅವರಿಗೆ ರಕ್ಷಣೆ ಕೊಡುತ್ತೀರಾ ? ಇಲ್ಲ ಎಂದರೆ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತೀರಾ ಎಂದು ನಾನು ಸರಕಾರವನ್ನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.— ನಾನು ಖಡಾಖಂಡಿತವಾಗಿ ಹೇಳಿದ್ದೇನೆ. ಯಾರು ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳಿದ್ದೇನೆ. ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ, ಭ್ರಷ್ಟತನದಲ್ಲಿ ತೊಡಗಿದ್ದಾರೆ ಅವರ ಮೇಲೆ ಏನು ಕಾನೂನು ಪ್ರಕಾರ ಶಿಕ್ಷೆ ಮಾಡಬೇಕು ಅದನ್ನು ಮಾಡುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು. — ಇಲ್ಲ, ನೀವು ಕುಳಿತುಕೊಳ್ಳಿ ಮಾನ್ಯ ಇದಿನಬ್ಬನವರು ಕೇಳಲಿ.

ಶ್ರೀ ಗೋಪಾಲ ಮುಕುಂದ ಕಾನಡೆ.— ಕೆಲವು ವಿಚಾರ ಹೇಳುತ್ತೇನೆ. ಯಾರು ಳ ಸಾವಿರ ಕೆ.ಜಿ. ಹಾಲ್ಮಡ್ಡಿಯನ್ನು ಹಿಡಿದು ಕೊಟ್ಟಿದ್ದಾರೋ ಅವರನ್ನು ಪಗಾಳಪಣೆ ಮಾಡಿದ್ದೀರಿ, ಇದು ಲಕ್ಷಾಂತರ ರೂಪಾಯಿಗಳದ್ದು. ನೀವು ನಾಚಿಯಾಗುವಂತಹ ಕೆಲಸ ಮಾಡಿದ್ದೀರಿ. ಆತ ಹರಿಜನರು, ದಕ್ಷ ಅಧಿಕಾರಿಯನ್ನು ನೀವು ವರ್ಗಾವಣೆ ಮಾಡಿದ್ದೀರಿ. ಯಾವ ಅಧಿಕಾರಿ ಸ್ಮಗಲಿಂಗ್ ಮಾಡುತ್ತಾರೋ ಸರ್ಕಾರಕ್ಕೆ ನಷ್ಟ ಮಾಡುತ್ತಾರೋ ಅವರಿಗೆ ಪ್ರಮೋಷನ್ ಕೊಡುತ್ತೀರಿ. ಇದರಲ್ಲಿ ಸರ್ಕಾರ ಏನಾದರೂ ಶಾಮಿಲಾಗಿದೆಯೇ ಎಂದು ನಾನು ಕೇಳಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.— ಸನ್ಮಾನ್ಯ ಅಧ್ಯಕ್ಷರೆ, ವರ್ಗಾವಣೆಯಾಗಿರತಕ್ಕಂಥ ಅಧಿಕಾರಿ ಹರಿಜನ. ಜೊತೆಗೆ ಒಳ್ಳೆಯ ದಕ್ಷ ಅಧಿಕಾರಿ ಕೂಡ. ಅಂತಹ ಅಧಿಕಾರಿಯನ್ನು ಪರ್ಗಾಪಣೆ ಮಾಡಿದ್ದಾರೆ. ಇವನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಿ ವರ್ಗಾವಣೆಯನ್ನು ರದ್ದು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.— ಈ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕೆಂದು ಕಳೆದ ಏಪ್ರಿಲ್ ತಿಂಗಳಲ್ಲಿ ಪ್ರಿನ್ಸಿಪಲ್ ಸಿ.ಸಿ.ಎಫ್ ರವರು ಸರ್ಕಾರಕ್ಕೆ ಬರೆದಿದ್ದು ಸರ್ಕಾರದ ಡಿ.ಪಿ.ಎ.ಆರ್ ನವರು ವರ್ಗಾವಣೆ ಆರ್ಡರ್‌ನ್ನು ಇಷ್ಯೂ ಮಾಡಿದ್ದಾರೆ. ಆ ಫೈಲನ್ನು ನಾನು ಕೇಳಿದ್ದೇನೆ. ಈತ ವರ್ಗಾವಣೆ ಆಗಿರುವುದು ಹಾಲ್ಮಡ್ಡಿಯನ್ನು ಹಿಡಿದ ಮೇಲೋ ಅಥವಾ ಅದಕ್ಕಿಂತ ಮುಂಚಿತವಾಗಿಯೋ ಎನ್ನುವುದನ್ನು ನೋಡಬೇಕಾಗಿ. ಪೂರ್ಣ ವಿವರ ನೋಡಿ ಯೋಚಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್. — ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು — ಇಲ್ಲ, ಆಗುವುದಿಲ್ಲ ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.—ನಾನು ಆ ಕ್ಷೇತ್ರದವನು. ನನಗೆ ಹೆಚ್ಚು ವಿಷಯ ಗೊತ್ತಿದೆ. ನಾನು ಸಹ ಸೆಂಟ್ ಸ್ಪೆಷಲ್ ಸಹಿ ಮಾಡಿದ್ದೇನೆ. ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು.—ನೀವು ಸಹಿ ಮಾಡಿದ್ದರೂ ಸಹ ೫ ಜನರಿಗೆ ಮಾತ್ರ ಅವಕಾಶ ಕೊಡುವುದಕ್ಕೆ ಬರುತ್ತದೆ. ಇಲ್ಲ ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.—ಒಂದು ನಿಮಿಷ ಅಧ್ಯಕ್ಷರೇ, ರಂಗಸ್ವಾಮಿ ಎನ್ನುವವರು ಹರಿಜನರು ಜೊತೆಗೆ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಕೂಡ ಅವರು ಬಂದ ಮೇಲೆ ಗಂಧದ ಮರ ಕಳ್ಳ ಸಾಗಾಣಿಕೆ ಕಡಿಮೆಯಾಗಿದೆ. ಜೊತೆಗೆ ಕಳ್ಳಸಾಗಾಣಿಕೆಯು ಸಹ ಕಡಿಮೆಯಾಗಿದೆ. ಆತ ಳ ಸಾವಿರ ಕೆ. ಜಿ. ಹಾಲ್ಮಡ್ಡಿಯನ್ನು ಹಿಡಿದಿದ್ದಾನೆ. ಅದರ ಬೆಲೆ ಇವತ್ತು ಸುಮಾರು ೧೦ ಲಕ್ಷ ರೂಪಾಯಿಗಳಾಗುತ್ತದೆ. ಅವರು ಪ್ರಭಾವಿ ಜನತಾ ಪಕ್ಷದ ಸಹಚರರು ಎಂದ ಮಾತ್ರಕ್ಕೆ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿದ್ದಾರೆ ಅಲ್ಲಿ ಈಗ ದೊಡ್ಡ ಅಂದೋಲನವಾಗಿದೆ. ಅಲ್ಲಿ ಈಗ ಸೆಕ್ಷನ್ ೪೪ಳಿ ಹಾಕಿ ಜನರ ನೆಮ್ಮದಿಯನ್ನು ಕೆಡಿಸಿದ್ದಾರೆ. ಸಾಗರ ಇವತ್ತು ಸ್ಮಶಾನವಾಗಿದೆ. ಈ ತರಹ ಇವರು ತಮ್ಮ ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆ ಮತ್ತು ಎಲ್ಲಾ ಯೋಜನೆಯಲ್ಲಿ ಸುಮಾರು ೬೬ ಜನ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆಂದು ನಾವು ಈ ಸಭೆಯಲ್ಲಿ ಹೇಳಿದೆವು. ಆದರೂ ಸಹ ಆ ಅಧಿಕಾರಿಗಳನ್ನು ಏನೇನೂ ಮಾಡಲಿಲ್ಲ ಇಂತಹ ಒಳ್ಳೆಯ ಕೆಲಸ ಮಾಡಿದ ರಂಗಸ್ವಾಮಿಯವರನ್ನು ವರ್ಗಾವಣೆ ಮಾಡಿರುವುದು ಸರಿಯೇ ? ಇವರೇನು ನ್ಯಾಯ ಮಾಡಿದರು ? ಸಾಗರ ತಾಲ್ಲೂಕಿನ ಎಲ್ಲಾ ಸಂಘಸಂಸ್ಥೆಗಳು ರೆಸಲ್ಯೂಷನ್ ಪಾಸ್ ಮಾಡಿ ಕಳುಹಿಸಿವೆ. ಅವು ಯಾವು

ದೆಂದರೆ ಜೆ. ಪಿ. ನಾಗರೀಕ ಯುವಕರ ವೇದಿಕೆ, ನಗರ ಯೋಜನಾ ಸಂಘದವರು, ಬಾಲಾಂಜನೇಯಂ ವ್ಯಾಯಾಮ ಸಂಘದವರು, ಗಾಂಧಿಯುವ ಜನ ವೇದಿಕೆಯವರು ಸಮತಾ ವೇದಿಕೆಯವರು, ಮತ್ತು ಸವಿತ ಮಹಿಳಾ ಸಂಘದವರು, ಆಟೋ ಚಾಲಕರ ಸಂಘದವರು ರೆಜಲ್ಯೂಷನ್ ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅಲ್ಲಿನ ನಾಗರೀಕರು ರೆಜಲೂಷನ" ಮಾಡಿ ಕಳುಹಿಸಿದ್ದಾರೆ, ಇಂತಹ ದಕ್ಷ ಅಧಿಕಾರಿಯನ್ನು ವರ್ಗ ಮಾಡಿರುವುದಂ ಅನ್ಯಾಯವಲ್ಲವೇ? ಸರ್ಕಾರದಲ್ಲಿ ಇತ್ತೀಚೆಗೆ ಇಂತಹವುಗಳು ಆಗಾಗ ನಡೆಯುತ್ತಿವೆ ಈ ಬಗ್ಗೆ ನಾನು ಒಂದು ಮಾತು ಹೇಳುವುದೇನೆಂದರೆ ಶಿವಮೊಗ್ಗ ತಾಲ್ಲೂಕಿನ ರಿಪ್ಪನ್‌ಪೇಟೆಯಲ್ಲಿ ಮಾನ್ಯ ಸಚಿವರಾದ ಜೆ. ಹೆಚ್. ಪಟೇಲ್‌ರವರ ಪಿ ಎ. ಎನ್ನುತಕ್ಕಂಥ ಒಬ್ಬ ಅಧಿಕಾರಿ ಕುಡಿದು ಗಲಾಟೆ ಮಾಡಿದ್ದಕ್ಕೆ ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ಅವನ ಮೇಲೆ ಸೆಕ್ಷನ್ ೧೦೯ರ ಪ್ರಕಾರ ಕೇಸ್ ಹಾಕಿದ್ದಕ್ಕೆ ಅವನನ್ನು ಮೂರೇ ದಿವಸದಲ್ಲಿ ಅಲ್ಲಿಂದ ವರ್ಗಾವಣೆ ಮಾಡಿಸಿದರು. ಆದ್ದರಿಂದ ಅಲ್ಲಿನ ಸಬ್ ಇನ್ಸ್‌ಪೆಕ್ಟರ್‌ರವರು ಕೇಸನ್ನು ಹಾಕುವುದಕ್ಕೆ ಹೆದರುತ್ತಿದ್ದಾರೆ.

ಅಧ್ಯಕ್ಷರು.—ನೀವು ಉದ್ದುದ್ದ ಭಾಷಣ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್,—ಎರಡನೇ ತಾರೀಕಿನ ರಾತ್ರಿ ಬ್ಯಾಂದಿ ಅಂಗಡಿಗೆ ನುಗ್ಗಿ ಅವರು ಗಲಾಟೆ ಮಾಡಿದ್ದಾರೆ. ಮಾನ್ಯ ಜೆ. ಹೆಚ್. ಪಟೇಲರ ಪಿ.ಎ. ಎನ್ನತಕ್ಕ ಕಾರಣಕ್ಕಾಗಿ ಅವನ ಮೇಲೆ ಕೇಸ್ ಹಾಕುವುದಕ್ಕೆ ಸಬ್ ಇನ್ಸ್‌ಪೆಕ್ಟರ್‌ರವರು ಹೆದರುತ್ತಿದ್ದಾರೆ.

ಅಧ್ಯಕ್ಷರು.—ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಕ್ಲಾರಿಫಿಕೇಷನ್ ಕೇಳಿ. ಉದ್ದುದ್ದ ಭಾಷಣ ಮಾಡುವುದಕ್ಕೆ ಆಗುತ್ತದೆ ಏನು ?

ಶ್ರೀ ಬಿ. ಸ್ವಾಮಿರಾವ್.—ನಾವು ಯಾರ ಹತ್ತಿರ ಇದನ್ನು ಹೇಳಿಕೊಳ್ಳಬೇಕು ?

ಅಧ್ಯಕ್ಷರು.—ನೀವು ಇದೇ ತರಹ ಮಾತನಾಡಿದರೆ ಎಲ್ಲಾ ಎಕ್ಸ್‌ಪಂಜ್ ಮಾಡಬೇಕಾಗುತ್ತದೆ. ವಿಷಯದ ಬಗ್ಗೆ ನೇರವಾಗಿ ಕೇಳಿ.

ಶ್ರೀ ಬಿ. ಸ್ವಾಮಿರಾವ್.—ನಾನು ಹೇಳುವುದಿಷ್ಟೇ

ಅಧ್ಯಕ್ಷರು.—ಅದರ ಬಗ್ಗೆ ಪಿಟೀಷನ್ ಬೇಕಾದರೆ ಕೊಡಿ. ಅದನ್ನು ಪಿಟಿಷನ್ ಕಮಿಟಿಗೆ ರೆಫರ್ ಮಾಡುತ್ತೇನೆ. ಈ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಬಿ ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ಇವರ ಟ್ರಾನ್ಸ್‌ಫರ್ ಆರ್ಡನ್ನು ಕ್ಯಾನ್ಸಲ್ ಮಾಡಿ ಅವರನ್ನು ಅಲ್ಲೇ ಇರುವುದಕ್ಕೆ ಆರ್ಡರ್ ಮಾಡಿದರೆ ಅದು ಜನಗಳಿಗೂ ಅನುಕೂಲವಾಗುತ್ತದೆ. ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ನಮಗೆ ನ್ಯಾಯ ಸಿಕ್ಕಂತೆಯೂ ಆಗುತ್ತದೆ. ಆ ಅಧಿಕಾರಿಯನ್ನು ಪುನಃ ಮೊದಲಿದ್ದ ಜಾಗಕ್ಕೇ ಹಾಕಬೇಕೆಂದು ಪುನಃ ಒತ್ತಿ ಒತ್ತಿ ಇನ್ನೊಮ್ಮೆ ಹೇಳುತ್ತೇನೆ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಅದೇ ತಾಲ್ಲೂಕಿನವನು ನಾನು ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಅಧ್ಯಕ್ಷರು.—ನೀವು ಅದೇ ತಾಲ್ಲೂಕಿನವರಾಗಿದ್ದಾಗ, ನೀವು ಏಕೆ ಕಾಲಿಂಗ್ ಅಟೆನ್‌ಷನ್ ಹಾಕಲಿಲ್ಲ ? ಈಗ ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಬಿ. ರಾಚಯ್ಯ —ಮಾನ್ಯ ಅಧ್ಯಕ್ಷರೇ, ವಿವಿಧ ಸಂಘಸಂಸ್ಥೆಗಳವರು ಆ ಅಧಿಕಾರಿಯು ಅಲ್ಲೆ ಇರಬೇಕೆಂದು ರೆಸೆಲ್ಯೂಷನ್ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವುಗಳನ್ನೆಲ್ಲಾ ನನಗೆ ಕಳುಹಿಸಿಕೊಡಲಿ. ನಾನು ಮೊದಲೇ ಹೇಳಿದ ಹಾಗೆ ಈ ವಿಷಯದಲ್ಲಿ ಏನೂ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ. ನಾನು ಎಲ್ಲಾ ವಿವರಗಳನ್ನು ತರಿಸಿಕೊಂಡು ಪೂರ್ಣವಾಗಿ ನೋಡಿ ನ್ಯಾಯ ದೊರಕಿಸಿ ಕೊಡುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಧರ್ಮಸಿಂಗ್‌ರವರ ಕಾಲಿಂಗ್ ಅಟೆನ್‌ಷನ್

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಡಿ.ಎಫ್.ಓ. ಅವರನ್ನು ವರ್ಗಾವಣೆ ಮಾಡಿರುವ ವಿಷಯದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಾನು ಅದೇ ತಾಲ್ಲೂಕಿನವನು.

ಅಧ್ಯಕ್ಷರು,—ತಾವು ಕೂಡಿ. ನಿಮಗೆ ಅವಕಾಶ ಸಿಗುವುದಿಲ್ಲ.

ಶ್ರೀ ಬಿ. ಧರ್ಮಪ್ಪ.—ಒಂದು ಸೆಕೆಂಡ್‌ನಲ್ಲಿ ಹೇಳಿಬಿಡುತ್ತೇನೆ.

ಅಧ್ಯಕ್ಷರು.—ನೀವು ಕೂಡ್ರಿ ಮಾನ್ಯ ಧರ್ಮಸಿಂಗ್‌ರವರೇ ತಾವು ಕಾಲಿಂಗ್ ಅಟೆನ್‌ಷನ್ ಕೇಳಿ.

೪) ಕೊಯ್ನಾ ಹಾಗೂ ಉಜ್ಜನಿ ಆಣೆಕಟ್ಟುಗಳಿಂದ ಹೊರ ಬಿಡುತ್ತಿರುವ ಹೆಚ್ಚುವರಿ ನೀರಿನಿಂದ ಭೀಮಾ ನದಿಯಲ್ಲಿ ಮಹಾಪೂರ ಉಂಟಾಗಿ ಜೇವರ್ಗಿ ತಾಲ್ಲೂಕಿನ ರೈತರ ಆಸ್ತಿ ಪಾಸ್ತಿಗೆ ನಷ್ಟ ಉಂಟಾಗಿರುವುದು

ಶ್ರೀ ಧರ್ಮಸಿಂಗ್ —ಮಾನ್ಯ ಅಧ್ಯಕ್ಷರೇ, ಕೊಯ್ನಾ ಹಾಗೂ ಉಜ್ಜನಿ ಆಣೆಕಟ್ಟುಗಳಿಂದ ಹೊರ ಬಿಡುತ್ತಿರುವ ಹೆಚ್ಚುವರಿ ನೀರಿನಿಂದ ಭೀಮಾ ನದಿಯಲ್ಲಿ ಮಹಾಪೂರವುಂಟಾಗಿ ಗುಲ್ಬರ್ಗಾ ಜಿಲ್ಲೆಯ ಭೀಮಾ ನದಿಯ ಕೆಳದಂಡೆ ಅದರಲ್ಲೂ ಮುಖ್ಯವಾಗಿ ಜೇವರ್ಗಿ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ರೈತರ ಆಸ್ತಿಪಾಸ್ತಿ ಹಾಗೂ ಜೀವಕ್ಕೆ ಉಂಟಾದ ಅಪಾರ ಹಾನಿಯ ಬಗ್ಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಆರ್.ಡಿ.ಸಿ (ರೂರಲ್ ಡೆವಲಪ್‌ಮೆಂಟ್ ಅಂಡ್ ಕೋ-ಆಪರೇಷನ್) ಇಲಾಖೆ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಮಾನ್ಯ ಸದಸ್ಯರು; ಭೀಮಾ ನದಿಯಲ್ಲಿ ಹೆಚ್ಚು ನೀರು ಬಂದು ರೈತರುಗಳ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳೊಡನೆ ಚರ್ಚೆ ಮಾಡಿ ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಅಲ್ಲಿ ಏನಾಗಿದೆ ಎಂದರೆ, ಉಜ್ಜನಿ ಮತ್ತು ಕೊಯಿನಾ ಡ್ಯಾಮ್‌ನಿಂದ ಹೆಚ್ಚುವರಿ ನೀರನ್ನು ಭೀಮಾ ನದಿಗೆ ಬಿಟ್ಟಿರುವುದರಿಂದ ಭೀಮಾ ನದಿಯಲ್ಲಿ ಹೆಚ್ಚು ನೀರು ಬಂದು ಜೇವರ್ಗಿ, ಇಂಡಿ ಮತ್ತು ಆಫ್‌ಜಲ್-ಪುರ ತಾಲ್ಲೂಕಿನಲ್ಲಿರುವ ಸುಮಾರು ೬೦-೭೦ ಹಳ್ಳಿಗಳು ನೀರಿನಲ್ಲಿ ಮುಳುಗಿ ಹೋಗಿವೆ.

ಎಲ್ಲಾ ಕಡೆಗಳಲ್ಲಿ ಸುಮಾರು ೬೦-೭೦ ಹಳ್ಳಿಗಳು ನೀರಿನಿಂದ ಮುಳುಗಿ ಹೋಗಿವೆ. ಈ ವಿಷಯವು ಬಹಳಷ್ಟು ಗಮನ ಕೊಡತಕ್ಕಂಥ ವಿಷಯವಾಗಿದೆ ಆದುದರಿಂದ ದಯವಿಟ್ಟು ಇದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ತಾವುಗಳು ತರಿಸಿ, ಅಂಥ ಹಳ್ಳಿಗಳಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕು. ಈ ಬಗ್ಗೆ ಮಹಾರಾಷ್ಟ್ರ ಸರಕಾರದವರ ಜೊತೆಯಲ್ಲಿ ಕೂಡ ತಾವು ಸಮಾಲೋಚನೆ ಮಾಡಬೇಕಾಗಿದೆ. ಆದುದರಿಂದ ಈ ಸೂಚನೆಯನ್ನು ನಿಮ್ಮಿಂದ ತಾರೀಖಿಗೆ ಮುಂದೂಡಿ ಎಲ್ಲಾ ಮಾಹಿತಿಗಳನ್ನು ಪಡೆದು ಒಂದು ವಿವರಾತ್ಮಕವಾದ ಉತ್ತರವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಪ್ರಕೃತಿಯ ವಿಕೋಪದಿಂದಾಗಿ ಹೆಚ್ಚು ಮಳೆ ಬಂದು, ನೀರು ಹೆಚ್ಚಿಗೆ ಬಂದರೆ ಅವರೇನೂ ಅದನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಹೆಚ್ಚಿಗೆ ಇರುವ ನೀರನ್ನು ಅವರು ಬಿಡಬೇಕಾಗುತ್ತದೆ. ಡ್ಯಾಮ್‌ನಲ್ಲಿ ಎಷ್ಟು ನೀರು ಹಿಡಿಯಲಿಕ್ಕೆ ಸಾಧ್ಯವೋ ಅಷ್ಟನ್ನು ಹಿಡಿದಿಟ್ಟುಕೊಂಡು ಅದು ಡೇಂಜರ್ ಮಟ್ಟಕ್ಕೆ ಬಂದಾಗ ಹೊರಗೆ ಬಿಡುತ್ತಾರೆ. ನಾವಾದರೂ ಕೂಡ ಅದೇ ಕೆಲಸವನ್ನು ಮಾಡಬೇಕಾಗುತ್ತದೆ. ಆದರೆ ಇಂಥ ಸಮಯದಲ್ಲಿ ಕೆಳಗಡೆ ಇರತಕ್ಕಂಥ ರೈತರಿಗೆ ಇನ್‌ಫಾರ್ಮ್ ಮಾಡಬೇಕಾಗುತ್ತದೆ. ನಾವು ಹೆಚ್ಚಿಗೆ ಇರುವ ನೀರನ್ನು ಬಿಡುತ್ತಿದ್ದೇವೆ ಕೆಳಗಡೆ ಇರತಕ್ಕಂಥ ರೈತರಂಗಳು ಎಚ್ಚರಿಕೆಯಿಂದ ಇರಬೇಕೆಂದು ತಿಳಿಸುವಲಿಕೆ ನೀಡಬೇಕಾಗುತ್ತದೆ ಇಂಥ ಸಮಯದಲ್ಲಿ ಆಗುವಂಥ ದುಷ್ಪರಿಣಾಮ ಏನೆಂದರೆ ಡ್ಯಾಮ್ ಪಕ್ಕದಲ್ಲಿರುವ ಎರಡೂ ದಂಡೆಯ ಮೇಲಿರತಕ್ಕಂಥ ಜಾಗಗಳಲ್ಲಿ ನೀರು ಹೆಚ್ಚಿಗೆ ಪ್ರವಾಹ ಭೂಮಿ ಕೊಚ್ಚಿಹೋಗುತ್ತದೆ, ಆಲ್ಲಿಯ ಬೆಳೆ ಹೋಗುತ್ತದೆ. ಅದರ ಜೊತೆಗೆ ನದಿ ದಂಡೆಯಲ್ಲಿರತಕ್ಕಂಥ ರೈತರಿಗೆ ಅಪಾಯ ಒದಗುವ ಸಂದರ್ಭವೂ ಇರುತ್ತದೆ. ಆದುದರಿಂದ ಅಂಥ ಸಮಯದಲ್ಲಿ ನಾವು ಸೂಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಹಾಗೆಯೇ ರೆವಿನ್ಯೂ ಇಲಾಖೆಯವರು ಇಂಥ ಸನ್ನಿವೇಶದಲ್ಲಿ ಆಗತಕ್ಕಂಥ ನಷ್ಟವನ್ನು ಸೂಕ್ತ ರೀತಿಯಲ್ಲಿ ಅಂದಾಜು ಮಾಡಿ ಅವರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ, ಅವಶ್ಯಕತೆ ಇದ್ದರೆ ಜನರನ್ನು ಸ್ಥಳಾಂತರ ಮಾಡಬೇಕಾಗುತ್ತದೆ. ಇದನ್ನು ಮಾಡಬೇಕಾಗುತ್ತದೆಯೇ